# ನಿಮ್ಮೊಡನೆ

## ನಕಲಿ ಔಷಧಿಗೆ ತಡೆ ಎಂದು?

ದೇಶದಾದ್ಯಂತ ನಕಲಿ ಔಷಧಿ ತಯಾರಕರ ದೊಡ್ಡ ಜಾಲವೇ ಕಾರ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೂ ಬಂದಿದೆ. ಪೊಲೀಸರು ದಾಳಿ ನಡೆಸಿ ನಕಲಿ ಔಷಧಿ ತಯಾರಿಕಾ ಫ್ಯಾಕ್ಟರಿಗಳನ್ನು ಪತ್ತೆ ಹಚ್ಚುವುದು ಹಾಗೂ ಆರೋಪಿಗಳನ್ನು ಬಂಧಿಸುವುದು ಆಗೊಮ್ಮೆ, ಈಗೊಮ್ಮೆ ಸುದ್ದಿಯಾಗುತ್ತಿದೆ. ಕೇಂದ್ರ ಸರಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದೆಯಾದರೂ, ನಕಲಿ ಔಷಧಿಗಳ ಜಾಲವನ್ನು ಕಿತ್ತೊಗೆಯಲು ಸಾಧ್ಯವಾಗಿಲ್ಲ.

ದೇಶದಲ್ಲಿ ವಾರ್ಷಿಕ ಔಷಧ ವ್ಯಾಪಾರದ ಒಟ್ಟು ಮೊತ್ತ 85 ಸಾವಿರ ಕೋಟಿ ರೂಪಾಯಿಗೂ ಹೆಚ್ಚು. 'ಇದರಲ್ಲಿ ಶೇಕಡಾ 20ರಿಂದ 25ರಷ್ಟು ಪಾಲು ನಕಲಿ ಮತ್ತು ನಿಷಿದ್ಧ ಔಷಧಿಗಳದ್ದು' ಎಂದು ಸರ್ಕಾರದ ಮೂಲಗಳೇ ಖಚಿತಪಡಿಸಿವೆ. ಅಂದರೆ 'ಪ್ರತಿವರ್ಷ ಭಾರತೀಯ ಗ್ರಾಹಕರು ಖರೀದಿಸುವ ಸುಮಾರು 17 ಸಾವಿರ ಕೋಟಿ ರೂಪಾಯಿಗೂ ಹೆಚ್ಚು ಮೊತ್ತದ ಔಷಧಿ ನಕಲಿ' ಎನ್ನುವುದು ನಿಜಕ್ಕೂ ಗಾಬರಿ ಹುಟ್ಟಿಸುವ ವಿಚಾರ. ಪ್ರತಿವರ್ಷವೂ ಹೊಸ ಹೊಸ ಕಾಯಿಲೆಗಳು ಹುಟ್ಟಿಕೊಳ್ಳುತ್ತಿರುವ ಪರಿಸ್ಥಿತಿಯಲ್ಲಿ, ನಕಲಿ ಔಷಧಿಯ ಮೂಲಕ ಜನರ ಆರೋಗ್ಯ ಇನ್ನಷ್ಟು ಹದಗೆಡುವುದು ದುರಂತವೇ ಸರಿ. ಜತೆಗೆ, ಪರಿಣಾಮಹೀನ ಹಾಗೂ ಸೈಡ್ ಎಫೆಕ್ಟ್ ಹೆಚ್ಚಿಸುವ ನಕಲಿ ಔಷಧಿಗಳಿಂದಾಗಿ, ದುಡಿದದ್ದರಲ್ಲಿ ಬಹುದೊಡ್ಡ ಪಾಲನ್ನು ಔಷಧಿಗೆ ಖರ್ಚು ಮಾಡಬೇಕಾದ ದುರ್ಬರ ಪರಿಸ್ಥಿತಿಯೂ ಜನರದ್ದಾಗಿದೆ.

ಸಾಮಾನ್ಯವಾಗಿ ಪ್ರಮುಖ ಬಹುರಾಷ್ಟ್ರೀಯ ಕಂಪೆನಿಗಳು ಉತ್ಪಾದಿಸುವ, ಬಹು ಜನಪ್ರಿಯ ಔಷಧಿಗಳೆಲ್ಲ ಈ ನಕಲಿ ಉತ್ಪಾದಕರ ಪಟ್ಟಿಯಲ್ಲಿವೆ ಎನ್ನುವುದು ಹಲವು ಪೊಲೀಸ್ ದಾಳಿಯ ಸಂದರ್ಭಗಳಲ್ಲಿ ಬಯಲಿಗೆ ಬಂದಿರುವ ಸತ್ಯ. ಅತ್ಯಂತ ಹೆಚ್ಚು ಸಂಖ್ಯೆಯಲ್ಲಿ ಮಾರಾಟವಾಗುವ ಜ್ವರ, ನೆಗಡಿ, ನೋವು ನಿವಾರಕ ಹಾಗೂ ಕಾಮೋತ್ತೇಜಕ ಮಾತ್ರೆಗಳೇ ನಕಲಿ ಉತ್ಪಾದಕರ ಅಚ್ಚುಮೆಚ್ಚಿನ ಮಾತ್ರೆಗಳಾಗಿವೆ. ಅತ್ಯಾಧುನಿಕ ತಂತ್ರಜ್ಞಾನದ ಮೂಲಕ ಒರಿಜಿನಲ್ ಮಾತ್ರೆಯ ಹೊರನೋಟವನ್ನೇ ಹೋಲುವಂತೆ ಇವರು ನಕಲಿ ಮಾತ್ರೆ, ಔಷಧಿ ತಯಾರಿಸುವ ಹಿನ್ನೆಲೆಯಲ್ಲಿ ಎಷ್ಟೋ ಸಲ ವೈದ್ಯರಿಗೂ ವ್ಯತ್ಯಾಸ ಗೊತ್ತಾಗುತ್ತಿಲ್ಲ. ಈ ಜಾಲದಲ್ಲಿ ಔಷಧಿ ತಯಾರಿಕಾ ಕಂಪೆನಿಗಳ ನೌಕರರು, ಹಲವು ವೈದ್ಯರು ಮತ್ತು ಸರ್ಕಾರಿ ಔಷಧ ನಿಯಂತ್ರಕರೂ ಶಾಮೀಲಾಗಿರುವ ಅನುಮಾನಗಳಿವೆ. ಉತ್ತರಪ್ರದೇಶ, ಮಹಾರಾಷ್ಟ್ರ, ಬಿಹಾರ, ಹರಿಯಾಣ, ಹಿಮಾಚಲ ಪ್ರದೇಶಗಳಲ್ಲಿ ಈ ನಕಲಿ ಜಾಲ ವ್ಯವಸ್ಥಿತವಾಗಿ ಕೆಲಸ ಮಾಡುತ್ತಿವೆ. 'ಈ ಜಾಲಗಳ ಬಗ್ಗೆ ಖಚಿತ ಮಾಹಿತಿ ನೀಡಿದವರಿಗೆ 25 ಲಕ್ಷ ರೂಪಾಯಿ ಬಹುಮಾನ ನೀಡುವುದಾಗಿ' ಕೇಂದ್ರ ಸರಕಾರ ಪ್ರಕಟಿಸಿದೆ. ನಕಲಿ ಹಾಗೂ ಕಳಪೆ ಔಷಧಿಗಳನ್ನು ಪತ್ತೆ ಹಚ್ಚಲು ಪ್ರತ್ಯೇಕ ಗುಪ್ತಚರ ವ್ಯವಸ್ಥೆಯನ್ನು ರೂಪಿಸುವುದಲ್ಲದೆ, ಖಾಸಗಿ ಪತ್ತೇದಾರ ಸಂಸ್ಥೆಗಳ ನೆರವು ಪಡೆಯುವುದಾಗಿಯೂ ಸರ್ಕಾರ ಹೇಳಿದೆ. ಆದರೆ ಈ ನಿಟ್ಟಿನಲ್ಲಿ ತ್ವರಿತವಾಗಿ ಯಾವುದೇ ಯೋಜನೆ ಜಾರಿಯಾಗಿಲ್ಲ ಎನ್ನುವುದು ವಿಷಾದದ ಸಂಗತಿ.

ರಾಜ್ಯದಲ್ಲೂ ನಕಲಿ ಔಷಧಿ ಜಾಲ ವ್ಯಾಪಕವಾಗಿದೆ. ಮೈಸೂರಿನಲ್ಲಿ ಕೆಲವು ತಿಂಗಳ ಹಿಂದೆ ನಡೆದ ಪೊಲೀಸ್ ದಾಳಿಯಲ್ಲಿ 56 ವಿವಿಧ ನಕಲಿ ಔಷಧಿಗಳು ಪತ್ತೆಯಾಗಿದ್ದವು. ಆದರೆ ಈ ಔಷಧಿಗಳು ಯಾವುವು ಎಂಬ ಬಗ್ಗೆ ಔಷಧಿ ನಿಯಂತ್ರಣ ಇಲಾಖೆ ಸಾರ್ವಜನಿಕರಿಗೆ ಮಾಹಿತಿ ನೀಡುವ ಕೆಲಸ ಮಾಡಿಲ್ಲ. 'ರಾಜ್ಯದಲ್ಲಿ ನಕಲಿ ಹಾಗೂ ಕಳಪೆ ಔಷಧಿಗಳು ತಯಾರಾಗುತ್ತಿವೆ. ಈ ಬಗ್ಗೆ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ಸ್ವತಃ ರಾಜ್ಯದ ವೈದ್ಯಕೀಯ ಶಿಕ್ಷಣ ಸಚಿವ ರಾಮಚಂದ್ರಗೌಡರು ಇತ್ತೀಚೆಗೆ ಹೇಳಿಕೆ ನೀಡಿದ್ದಾರೆ. ರಾಮಚಂದ್ರಗೌಡರು ವಿರೋಧ ಪಕ್ಷದ ಶಾಸಕರಾಗಿದ್ದಾಗಲೂ ಈ ವಿಷಯದ ಬಗ್ಗೆ ಕಾಳಜಿ ವಹಿಸಿ ಮಾತನಾಡಿದ್ದರು. ನಾಲ್ಕು ವರ್ಷಗಳ ಹಿಂದೆ ಶಾಸಕ ರಾಮಚಂದ್ರಗೌಡರು, 'ನಕಲಿ ಔಷಧ ಉತ್ಪಾದಕರ ವಿರುದ್ಧ ಕ್ರಮ ಕೈಗೊಳ್ಳಲು ರಾಜ್ಯ ಸರ್ಕಾರ ವಿಫಲವಾಗಿದೆ. ರಾಜ್ಯದ ಔಷಧ ನಿಯಂತ್ರಣ ಮಂಡಳಿಗೆ ಕಾನೂನಿನ ಬೆಂಬಲ ಇಲ್ಲದೆ ಇಲಾಖೆ ನಿಷ್ಕ್ರಿಯವಾಗಿದೆ' ಎಂದು ದೂರಿದ್ದರು. ಈಗ ಅವರದ್ದೇ ಸರಕಾರ ಬಂದಿದ್ದರೂ, ಅವರೇ ಸಚಿವರಾಗಿದ್ದರೂ ಈ ಕುರಿತು ಯಾವ ಉಪಕ್ರಮಗಳನ್ನೂ ಕೈಗೊಂಡಿಲ್ಲ. ಕಾನೂನು ತಿದ್ದುಪಡಿಯೂ ಆಗಿಲ್ಲ. ಮುಖ್ಯವಾಗಿ ರಾಜ್ಯದ ಆರೋಗ್ಯ ಸಚಿವ ಶ್ರೀರಾಮುಲು ಈ ಬಗ್ಗೆ ಈವರೆಗೆ ಚಕಾರವನ್ನೂ ಎತ್ತಿಲ್ಲ. ಸರ್ಕಾರಿ ಆಸ್ಪತ್ರೆಗಳಲ್ಲಿ ಬಳಕೆಯಾಗುತ್ತಿರುವ ಔಷಧಿಗಳ ತಪಾಸಣೆಯೂ ವ್ಯವಸ್ಥಿತವಾಗಿ ನಡೆಯುತ್ತಿಲ್ಲ. ನಕಲಿ ಔಷಧಿಗೆ ತಡೆ ಹಾಕುವ ಕೆಲಸವನ್ನು ಯಾರು ಮಾಡಬೇಕು?

■ ಬಿ.ಎಂ. ಹನೀಫ್

ದೇಶದಲ್ಲಿ ವಾರ್ಷಿಕ ಔಷಧ ವ್ಯಾಪಾರದ ಒಟ್ಟು ಮೊತ್ತ 85ಸಾವಿರ ಕೋಟಿ ರೂಪಾಯಿಗೂ ಹೆಚ್ಚು. 'ಇದರಲ್ಲಿ ಶೇಕಡಾ 20ರಿಂದ 25ರಷ್ಟು ಪಾಲು ನಕಲಿ ಮತ್ತು ನಿಷಿದ್ಧ ಔಷಧಿಗಳದ್ದು' ಎಂದು ಸರ್ಕಾರದ ಮೂಲಗಳೇ ಖಚಿತಪಡಿಸಿವೆ. ಅಂದರೆ 'ಪ್ರತಿವರ್ಷ ಭಾರತೀಯ ಗ್ರಾಹಕರು ಖರೀದಿಸುವ ಸುಮಾರು 17 ಸಾವಿರ ಕೋಟಿ ರೂಪಾಯಿಗೂ ಹೆಚ್ಚು ಮೊತ್ತದ ಔಷಧಿ ನಕಲಿ' ಎನ್ನುವುದು ನಿಜಕ್ಕೂ ಗಾಬರಿ ಹುಟ್ಟಿಸುವ ವಿಚಾರ.

